


International Journal of Kannada Research
www.kannadajournal.com

**ISSN: 2454–5813**
IJKR 2020; 6(2): 19-22
© 2020 IJKR
www.kannadajournal.com
Received: 13-01-2020
Accepted: 15-02-2020

**ಚೇತನಾ ಹೆಗಡೆ**
ಸಂಶೋಧನಾ ವಿದ್ಯಾರ್ಥಿ
ಡಾ.ಡಿ.ವಿ.ಗುಂಡಪ್ಪ
ಕನ್ನಡ ಅಧ್ಯಯನ ಕೇಂದ್ರ
ತುಮಕೂರು
ವಿಶ್ವವಿದ್ಯಾನಿಲಯ,
ತುಮಕೂರು

**Corresponding Author:**
**ಚೇತನಾ ಹೆಗಡೆ**
ಸಂಶೋಧನಾ ವಿದ್ಯಾರ್ಥಿ
ಡಾ.ಡಿ.ವಿ.ಗುಂಡಪ್ಪ
ಕನ್ನಡ ಅಧ್ಯಯನ ಕೇಂದ್ರ
ತುಮಕೂರು
ವಿಶ್ವವಿದ್ಯಾನಿಲಯ,
ತುಮಕೂರು

# ಸ್ತ್ರೀ: ಅಸ್ತಿತ್ವ ನಿರ್ವಚನ (ಮಹಿಳಾ ಕಥಾ ಸಾಹಿತ್ಯವನ್ನು ಅನುಲಕ್ಷಿಸಿ)

**ಚೇತನಾ ಹೆಗಡೆ**

ಎರಡು ಸಾವಿರ ವರ್ಷಗಳ ಸುದೀರ್ಘವಾದ ಕನ್ನಡ ಸಾಹಿತ್ಯದ ಇತಿಹಾಸದ ಪುಟಗಳು ಮಹಿಳೆಯ ಅಸ್ತಿತ್ವದ ಸ್ಥಿತ್ಯಂತರಗಳಿಗೆ ಸಾಕ್ಷಿಯಾಗುತ್ತವೆ ಮತ್ತು ಕಾಲಗರ್ಭದಲ್ಲಿ ಹುದುಗಿದ ಸ್ತ್ರೀಯ ಬದುಕಿನ ವಿವರಗಳನ್ನು ಬಿಚ್ಚಿಡುತ್ತವೆ. ಬೇಟೆಯ ಅನಾಗರೀಕ ಸಂಸ್ಕೃತಿಯಲ್ಲಿ ಪುರುಷನಿಗೆ ಸಮಾನ ನೆಲೆಯಲ್ಲಿ, ಮುಕ್ತ ಅವಕಾಶಕ್ಕೆ ತೆರೆದುಕೊಂಡಿದ್ದ ಸ್ತ್ರೀ ಬದುಕು ಕೃಷಿಯ ನಾಗರೀಕ ಸಂಸ್ಕೃತಿಯತ್ತ ಸಮಾಜ ಚಲಿಸಿದಾಗ ಹಲವಾರು ಬದಲಾವಣೆಗೊಳಗಾಯಿತು. ಇದು ಮಾತೃ ಪ್ರಧಾನತೆಯಿಂದ ಪಿತೃಪ್ರಧಾನತೆಯೆಡೆಗೆ ಸಂಸ್ಕೃತಿ ಹೊರಳಿದ ಸಮಯ. ಕುಟುಂಬ, ಆಸ್ತಿ, ಅಧಿಕಾರ ಎಂಬ ಪರಿಕಲ್ಪನೆಗಳು ಹುಟ್ಟಿಕೊಂಡು ಪ್ರಭುತ್ವ, ಧರ್ಮ,ಸಮಾಜ, ಸಂಸ್ಕೃತಿಯ ಕಬಂಧಬಾಹುಗಳಲ್ಲಿ ಅವಳ ದೇಹ, ಮನಸ್ಸು ಒಳಗೊಂಡಂತೆ ಸಂಪೂರ್ಣ ವ್ಯಕ್ತಿತ್ವ ಅವನ ಅಧೀನತೆಗೆ ಒಳಗಾಯಿತು. ಸಮಾಜ ಮತ್ತು ಸಂಸ್ಕೃತಿಯಿಂದ ಮಾತೃತ್ವ, ಸತೀತ್ವ, ಪಾತಿವ್ರತ್ಯದ ನೆಲೆಯಲ್ಲಿ ಧನ್ಯತೆ ಪಡೆಯುವ ಸ್ತ್ರೀ ಮಾದರಿಗಳು ಆದರ್ಶವೆಂಬಂತೆ ನಿರ್ಮಿತವಾಗಿದ್ದು, ಪುರುಷ ಸಮಾಜದ ಒತ್ತಡಗಳನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುವ ಸ್ತ್ರೀ ಸಮುದಾಯಗಳು ಬಹುಪಾಲು ಕಂಡುಬಂದಿವೆ. ಅವಳ ಪ್ರಪಂಚದ ಶೋಧಕ್ಕೆ ಹೊರಟಾಗ ಅಲ್ಲಿ 'ವಿಸ್ಮೃತಿ'ಯೂ ಇದ್ದು 'ಅರಿವಿನ ಸ್ಫೋಟ'ವೂ ಕಂಡುಬಂದಿದೆ. ಈ 'ದ್ವಿಸ್ತರ ಪ್ರತಿಬಿಂಬನೆ'ಯಲ್ಲಿ ವ್ಯವಸ್ಥೆಯನ್ನು ಅಪ್ಪಿ, ಒಪ್ಪಿ ಬಾಳಿದವರು ಮತ್ತು ವಿರೋಧಿಸಿ ಬಾಳಿದವರೂ ಚಿತ್ರಿತವಾಗುತ್ತಾರೆ.

ಪ್ರಾಚೀನ ಸಾಹಿತ್ಯದಲ್ಲಿ ಮಹಿಳಾ ಸಾಹಿತ್ಯವನ್ನು ಗುರುತಿಸುವುದಕ್ಕೆ ಹೊರಟಾಗ ಅಲ್ಲಲ್ಲಿ ಸ್ತ್ರೀ ಪ್ರೌಢಿಮೆ ಕಂಡುಬಂದರೂ ಅತ್ಯಂತ ವಿರಳ ಎನ್ನಬಹುದು. ವೇದಗಳ ಸೃಷ್ಟಿಯಲ್ಲಿ ಭಾಗವಹಿಸಿ ಋಕ್ಕುಗಳನ್ನು ರಚಿಸಿದ ಅಪಲಾ, ಘೋಷಾ, ಸೂರ್ಯಾ, ಅದಿತಿ, ಯಜ್ಞ ಯಾಗಾದಿಗಳಲ್ಲಿ ಭಾಗವಹಿಸುತ್ತಿದ ಗಾರ್ಗಿ, ಮೈತ್ರೇಯಿ ಮುಂತಾದ ಪ್ರಜ್ಞಾವಂತ ಮಹಿಳೆಯರು ಸಾಹಿತ್ಯ ಕ್ಷೇತ್ರದಲ್ಲಿ ಪಾಲ್ಗೊಂಡು ತಮ್ಮ ವಿಚಾರಧಾರೆಗಳನ್ನು ಅಭಿವ್ಯಕ್ತಿಸಿರುವುದು ಕಂಡುಬಂದರೂ ಅದು ಸಂಪೂರ್ಣ ಸ್ತ್ರೀ ಸಮುದಾಯದ ಅಭಿವ್ಯಕ್ತಿಯಲ್ಲ. ಆಕೆ ಎಲ್ಲ ವರ್ಗಗಳ ಪ್ರತಿನಿಧಿ ಅಲ್ಲ ಎಂಬುದು ನಿರ್ವಿವಾದ. ಅನಕ್ಷರತೆ, ಸಿದ್ಧ ಮಾದರಿ ಸ್ತ್ರೀತ್ವದ ಅನುಕರಣೆ, ಆರ್ಥಿಕ ಅವಲಂಬನೆ, ಪಿತೃ ಪ್ರಧಾನತೆಯ ಸಂಕೋಲೆಗಳು, ಗೌಣವಾಗಿರುವ ಸ್ಥಾನ, ವಿಸ್ಮೃತಿಗೊಳಗಾದ ಸ್ತ್ರೀ ಪ್ರಜ್ಞೆ ಮುಂತಾದ ಕಾರಣಗಳಡಿಯಲ್ಲಿ ಅವಳ ಹಿನ್ನಡೆ ಕಂಡುಬರುತ್ತದೆ. ತನ್ನ ಜೈವಿಕತೆ ಮತ್ತು ಸಾಂಸ್ಕೃತಿಕತೆಯಿಂದ ಪುರುಷನಿಂದ ವಿಭಿನ್ನವಾಗುವ ಸ್ತ್ರೀಲೋಕದ ಸಂವೇದನೆಗಳ ಅಭಿವ್ಯಕ್ತಿ ಮಾದರಿಗಳನ್ನು 'ಜನಪದ ಸಾಹಿತ್ಯ'ದಲ್ಲಿ ಕಾಣಬಹುದಾಗಿದೆ. ಪ್ರಧಾನವಾಹಿನಿಯಾದ ಶಿಷ್ಟ ಪರಂಪರೆಯ ಆರಂಭದ ಹಂತದಲ್ಲಿ ಚಿತ್ರಿತವಾಗದ ಸ್ತ್ರೀ ಬದುಕಿನ ವಿಶಿಷ್ಟತೆ, ಅವಳ ಮನೋಪ್ರಪಂಚದ ವ್ಯಾಪಾರ ದೇಸಿ ಮೂಲದ ಕಂಠಸ್ಥ ಮಾಧ್ಯಮದಲ್ಲಿ ನಿರ್ವಚನಗೊಂಡಿದೆ. ಹೆಣ್ಣಿನ ಧ್ವನಿಯ ದಾಖಲಾತಿ ಇಲ್ಲದ ಶಿಷ್ಟ ಸಾಹಿತ್ಯಕ್ಕೆ ಜಾನಪದ ಸಾಹಿತ್ಯದ ಮಹಿಳಾ ದಾಖಲಾತಿ ಪ್ರತ್ಯುತ್ತರವಾಗಿದೆ. ಇಲ್ಲಿ ಅವಳ ಖಾಸಗಿ ಪ್ರಪಂಚವನ್ನು ಪದರು ಪದರಾಗಿ ಬಿಡಿಸಿ ಒಳಹೊಕ್ಕು ನೋಡಲು ಸಾಧ್ಯವಿದ್ದು, ವಿಸ್ಮೃತಿಯಲ್ಲಿ ಕಳೆದುಹೋದ ಮಹಿಳಾ ಪ್ರಪಂಚವನ್ನು ಸ್ಮೃತಿಗೆ ತರುವಲ್ಲಿ ಇಲ್ಲಿನ ಸ್ತ್ರೀ ಮಾದರಿಗಳು ಗಣನೀಯ ಪ್ರಭಾವ ಬೀರುತ್ತದೆ. ಜನಪದ ಸಮಾಜ ಮತ್ತು ಸಂಸ್ಕೃತಿಯ ಒಳನೋಟಗಳ ಶೋಧ ಹೆಣ್ಣಿನ ಧ್ವನಿಯ ಸ್ಪಷ್ಟತೆಗೆ ಹಲವು ಅಂಶಗಳನ್ನು ಉದಾಹರಿಸುತ್ತದೆ. ಅವಳ ಅಧೀನತೆ, ತಲ್ಲಣ ದಾಖಲಾದಂತೆ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುವ ಕ್ರಮ, ಎದುರಿಸಿದ ಸವಾಲುಗಳು, ಪ್ರತಿರೋಧದ ಮಾದರಿಗಳೂ ಅಭಿವ್ಯಕ್ತಿಗೊಂಡಿದೆ. ಇಲ್ಲಿನ ನಿರೂಪಣಾ ಮಾದರಿಗಳು ವಿಭಿನ್ನವೂ, ವಿಶಿಷ್ಟವೂ ಆಗಿದ್ದು ಸ್ಥಾಪಿತ ಮೌಲ್ಯಗಳಿಗೆ ಅಧೀನವೂ ಆಗಿದ್ದರೂ, ಅಂತರ್ಗತವಾದ ಸುಪ್ತಪ್ರಜ್ಞೆಯ ನಿರಂತರತೆಯು ಅಗತ್ಯಕ್ಕೆ ತಕ್ಕಂತೆ ಪ್ರಕಟವಾಗಿ ಪ್ರಧಾನ ಶಕ್ತಿಯನ್ನು ಒಡೆಯುತ್ತದೆ. ಉದಾಹರಣೆಗೆ ಮಲೆಯ ಮಾದೇಶ್ವರ ಕಾವ್ಯದಲ್ಲಿ

‘ಸಂಕಮ್ಮ’, ಜುಂಜಪ್ಪನ ಕಾವ್ಯದಲ್ಲಿ ‘ಚೆನ್ನಮ್ಮ’, ತುಳು ಪಾಡ್ದನದ ‘ಸಿರಿ’, ‘ಮಾನಿಗ’ ಮುಂತಾದವುಗಳನ್ನು ಗುರುತಿಸಬಹುದು.

ಯುದ್ಧ, ಅಧಿಕಾರ, ಪರಾಕ್ರಮ, ರಾಜ್ಯ ವಿಸ್ತರಣೆಯ ಪುರುಷನ ಸಾಮರ್ಥ್ಯದ ಎದುರು ಮುಖಾಮುಖಿಯಾಗುವಂತಹ ಸ್ತ್ರೀ ಪಾತ್ರಗಳು ‘ಚಂಪೂ ಸಾಹಿತ್ಯ’ದ ಅವಧಿಯಲ್ಲಿ ಕಂಡುಬಂದಿಲ್ಲ. ಪತ್ನಿ, ಪ್ರೇಯಸಿ, ತಾಯಿ, ಮಗಳು, ಸೋದರಿ, ವೇಶ್ಯೆ ಮುಂತಾದ ಪುರುಷ ಕೇಂದ್ರಿತ ನೆಲೆಯಿಂದ ಗುರುತಿನ ನಿಧಾನವಾಗಿ ಕರಗಿಹೋಗುವ ಪಾತ್ರಗಳಿದೆಯೆ ವಿನಃ ತನ್ನ ಅಸ್ಮಿತೆಯನ್ನು ಪ್ರಖರವಾಗಿ ಅಭಿವ್ಯಕ್ತಿಸಿದ, ಅಸ್ತಿತ್ವ ಛಾಪಿಸಿದ ಪಾತ್ರಗಳು ದಾಖಲಾಗಿಲ್ಲ. ಅವಳು ದಾಸಿಯೇ ಆಗಿರಲಿ, ರಾಣಿಯೇ ಆಗಿರಲಿ ಸಮಾಜ ಆರೋಪಿತ ಸತೀತ್ವ, ಪಾತಿವ್ರತ್ಯ, ಮಾತೃತ್ವಗಳ ನಿರಂತರ ಸಂರಕ್ಷಕಿಯಾಗಿದ್ದರೆ ಸಾಕು ಎಂಬ ನಿಲುವು ಅಭಿವ್ಯಕ್ತವಾಗಿದೆ. ಅವನನ್ನು ಮೆಚ್ಚಿಸಲು ಅಲಂಕಾರದ ಗೊಂಬೆಯಾಗಿ, ಅವನ ಹಿಂಬಾಲಕಿಯಾಗಿ, ದಾಸಿಯಾಗಿ, ಒಟ್ಟಿನಲ್ಲಿ ಅಧೀನ ಪಾತ್ರದಲ್ಲಿ ಅವಳು ವಿಶ್ಲೇಷಿತವಾಗಿದ್ದಾಳೆ. ಅಂಗಾಂಗಳ ವರ್ಣನೆಯಲ್ಲಿ ಅಲಂಕಾರದ ಗೊಂಬೆಯಾಗಿ ಪರಿಕಲ್ಪಿತವಾದ ಸ್ತ್ರೀಯ ಮನಸ್ಸಿನ ಕುರಿತಾದ ಚರ್ಚೆ ಕಂಡುಬಂದಿಲ್ಲ. ಭೋಗದ ಪರಿಕಲ್ಪನೆಯಲ್ಲಿ ಅವಳ ಅಸ್ತಿತ್ವ ಇರುವುದು ಸಮರ್ಪಿಸಿಕೊಳ್ಳುವಿಕೆಯಲ್ಲಿ ಮಾತ್ರ. ದೇಹ, ಲೈಂಗಿಕತೆ, ತಾಯ್ತನ, ಪಾತಿವ್ರತ್ಯ ಎಲ್ಲವೂ ಅವನ ಹಿಡಿತದಲ್ಲಿದ್ದು ಅವನ ಆಸೆ, ಆಕಾಂಕ್ಷೆ, ಆಕ್ರಮಣಕ್ಕೆ ಆಳ್ವಿಕೆಗೆ ಎಲ್ಲದಕ್ಕೂ ಅವಳ ದೇಹವೇ ಬಲಿ. ದುರಂತವೆಂದರೆ ಆ ದೇಹದೊಳಗಿರುವ ಮನಸ್ಸಿಗೆ ಯಾವ ಪ್ರಾಮುಖ್ಯತೆಯೂ ಇಲ್ಲ. ಪ್ರಾಚೀನ ಕಾವ್ಯಗಳಲ್ಲಿ ಸ್ತ್ರೀ ವೈರಾಗ್ಯದ ಪ್ರಚೋದಿತಳಾಗಿಯೂ, ಆಧ್ಯಾತ್ಮಿಕತೆಯಿಂದ ಲೌಕಿಕಕ್ಕೆ ಸೆಳೆಯುವವಳೂ ಆಗಿ ಕಂಡುಬಂದಿದ್ದಾಳೆ. ಭೋಗ ಮತ್ತು ವೈರಾಗ್ಯದ ಅಡಿಯಲ್ಲಿ ಅವಳ ಚಿತ್ರಣ ಅಸ್ಪಷ್ಟವಾಗಿದ್ದು, ಇಹದ ಬದುಕಿಗೆ ಸಾರ್ಥಕತೆ ನೀಡುವವಳು ಪರದ ಬದುಕಿನತ್ತ ಚಲಿಸಲು ಅಡೆತಡೆ ಎಂಬಂತೆ ದಾಖಲಾಗಿದೆ. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯನ್ನು ಪರಸ್ಪರ ವೈರುಧ್ಯ ಭಾವಗಳಲ್ಲಿ ಗುರುತಿಸಲಾಗಿದೆ. ಸಮಾಜವು ಸ್ತ್ರೀಗೆ ಜಗನ್ಮಾತೆ, ಮಾತೆ, ದೇವಿ, ಶಕ್ತಿ ಸ್ವರೂಪಿಣಿ, ಪೂಜ್ಯಳು ಎಂಬ ಗೌರವ ನೀಡುತ್ತಲೇ ಮಾಯೆ, ವಿನಾಶಿನಿ, ಮೋಕ್ಷಕ್ಕೆ ಅಡ್ಡಿ ಎಂದು ದೂಷಿಸುತ್ತ ತಿರಸ್ಕಾರವನ್ನು ತೋರುತ್ತದೆ. ಒಟ್ಟಿನಲ್ಲಿ ಪುರುಷ ನಿರ್ಮಿತ ಮಾದರಿಗೆ ಸಮರ್ಪಿಸಿಕೊಂಡ ಹೆಣ್ಣು ದೇವತೆಯಾಗಿ, ಸ್ಥಾಪಿತ ಮಾದರಿಗೆ ಒಳಪಡದ ಹೆಣ್ಣು ರಾಕ್ಷಸಿಯಾಗಿ ಗುರುತಿಸಲ್ಪಡುತ್ತಾಳೆ. ‘ದೇವತೆ’ ಎಂಬ ವೈಭವೀಕಕರಣ, ‘ವಿನಾಶಿನಿ’ ಎಂಬ ದೂರೀಕರಣ ಇವರೆಡೂ ಸಮಾಜ ರೂಪಿಸಿದ ಪ್ರತಿಮೆಗಳಾಗಿದ್ದು ಆರೋಪಿತ ಮೌಲ್ಯಗಳ ನಿರ್ಮಿತಿಯ ಆಚೆಗೆ ಅವಳನ್ನು ಮನುಷ್ಯಳಾಗಿ ಸಹಜೀವಿಯಾಗಿ ಗುರುತಿಸಿಲ್ಲ ಎಂಬುದು ವಿಷಾದನೀಯ.

ಕನ್ನಡ ನೆಲದಲ್ಲಿ ಸ್ವಂತಿಕೆಯಿಂದ ಮೂಡಿಬಂದ ‘ವಚನ ಸಾಹಿತ್ಯ’ ಲೌಕಿಕ ಮತ್ತು ಆಧ್ಯಾತ್ಮಿಕ ಎರಡೂ ನೆಲೆಯಲ್ಲಿಯೂ ಅಲಕ್ಷಿತವಾಗಿ ಅಂಚಿಗೆ ಸರಿಯಲ್ಪಟ್ಟಿದ್ದ ಸ್ತ್ರೀಗೆ ಸಮಾನ ಅವಕಾಶ ನಿರ್ಮಿಸಿತು. ಪರಿವರ್ತನೆಯ ಅಲೆಯ ರಭಸಕ್ಕೆ ಧರ್ಮ, ಸಂಪ್ರದಾಯ, ಮೌಲ್ಯ, ರೀತಿ, ನೀತಿ ಮುಂತಾದವು ಪಲ್ಲಟಗೊಂಡ ಈ ಕಾಲದಲ್ಲಿ ಸುಪ್ತವಾಗಿದ್ದ ಅನೇಕ ಸ್ತ್ರೀ ಚೇತನಗಳು ಸಾಂಪ್ರದಾಯಿಕತೆಯ ಸಂಕೋಲೆಗಳನ್ನು ಕಳಚಿ ‘ವೈಚಾರಿಕತೆ’ಯ ಉಡುಗೆ ತೊಟ್ಟು ತಮ್ಮ ಆತ್ಮ ಶೋಧದತ್ತ ಸಾಗುತ್ತವೆ. ಪುರುಷನಿಗೆ ಸರಿಸಮಾನಾಗಿ ತತ್ವ ಜಿಜ್ಞಾಸೆಗಳಿಯುವ, ಚರ್ಚಿಸುವ, ವಾಗ್ವಾದಿಸುವ, ಅಭಿವ್ಯಕ್ತಿಸುವ, ಸ್ವಯಂಪ್ರಜ್ಞೆ ಶೋಧಿಸುವ, ಇತರರನ್ನು ಎಚ್ಚರಿಸುವ ಸಾಮಾಜಿಕ ಅಂಕುಕೊಂಡು ತಿದ್ದುವ ಎಲ್ಲ ಪ್ರಯತ್ನಗಳನ್ನು ಸ್ತ್ರೀ ಮಾಡಿರುವುದು ಗಮನಾರ್ಹ. ಪೂರ್ವಾಗ್ರಹಗಳನ್ನು ಒಡೆಯುವ, ಗ್ರಹಿಕೆಯ ಮಿತಿಗಳನ್ನು ಮೀರುವ ದೃಷ್ಟಿಕೋನ ಇಲ್ಲಿ ಅಭಿವ್ಯಕ್ತವಾಗಿದೆ. ಲೈಂಗಿಕತೆಗಷ್ಟೆ ಅವಳ ಅಸ್ತಿತ್ವ ಸೀಮಿತವಲ್ಲ. ಅಧೀನತೆ ನೆಲೆಯಾಚೆಗೂ ಅವಳು ಅಸ್ಮಿತೆ ಛಾಪಿಸಬಲ್ಲಳು ಎಂಬುದು ಸ್ತ್ರೀ – ಪುರುಷರಿಬ್ಬರಿಂದಲೂ ಅಭಿವ್ಯಕ್ತವಾಗಿದ್ದು ವಿಶೇಷ ಸಂಗತಿ. ಸ್ತ್ರೀ – ಪುರುಷರಿಬ್ಬರೂ ಪರಸ್ಪರರನ್ನು ಸೌಹಾರ್ದಯುತ ನೆಲೆಯಲ್ಲಿ ಕಂಡು ಸಹಕಾರದಿಂದ ಬದುಕಿರುವುದು ಇಂದಿಗೂ ಆದರ್ಶವಾಗಿದೆ.

ವಚನ ಸಾಹಿತ್ಯದ ನಂತರದಲ್ಲಿ ಇಳಿಮುಖವಾಗಿದ್ದ ಸ್ತ್ರೀ ಸಾಹಿತ್ಯ ಮತ್ತೆ ತನ್ನ ಇರುವನ್ನು ದೃಢವಾಗಿ ವ್ಯಕ್ತಪಡಿಸಿದ್ದು ಹೊಸಗನ್ನಡ ಸಾಹಿತ್ಯದ ‘ನವೋದಯಸಾಹಿತ್ಯ’ದ ಕಾಲಘಟ್ಟದಲ್ಲಿ ಎಂದರೆ ತಪ್ಪಾಗಲಾರದು. ನವೋದಯದಿಂದ ಇಂದಿನವರೆಗೂ ಭಿನ್ನವಾಗಿ, ದಿಟ್ಟವಾಗಿ ನಿರ್ಭಿಡೆಯಿಂದ ಹೊರಬರುತ್ತಿರುವ ಮಹಿಳಾ ದನಿ ತನ್ನದೇ ಆದ ವಿಶಿಷ್ಟತೆಯಿಂದ ಗಮನ ಸೆಳೆಯುತ್ತದೆ. ಆಧುನಿಕ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ತನ್ನ ಛಾಪನ್ನು ಮೂಡಿಸಿದ ಮೊದಲ ಲೇಖಕಿ ತಿರುಮಲಾಂಬಾ. ಇವರ ಜೊತೆಯಲ್ಲಿ ತಮ್ಮ ದಿಟ್ಟ ಹೆಜ್ಜೆಗಳನ್ನು ಮೂಡಿಸಿದವರು ಆರ್.ಕಲ್ಯಾಣಮ್ಮ, ತಿರುಮಲೆ ರಾಜಮ್ಮ, ಶಾಮಲಾದೇವಿ, ಸರಸ್ವತಿಬಾಯಿ ರಾಜವಾಡೆ(ಗಿರಿಬಾಲೆ), ಸಿ.ಎನ್ ಜಯಲಕ್ಷ್ಮಿದೇವಿ, ಕೊಡಗಿನ ಗೌರಮ್ಮ, ಸರಸ್ವತಿದೇವಿ ಗೌಡರ, ಸೀತಾದೇವಿ ಪಡಕೋಣೆ, ಬೆಳಗಿರಿ ಜಾನಕಮ್ಮ ಮುಂತಾದವರು, ಸಾಹಿತ್ಯದ ಹಲವು ಪ್ರಕಾರಗಳಲ್ಲಿ ತಮ್ಮ ಸೃಜನಶೀಲತೆಯನ್ನು ವ್ಯಕ್ತಪಡಿಸಿದರು. ತಿರುಮಲಾಂಬ, ಆರ್ ಕಲ್ಯಾಣಮ್ಮನವರ ರಚನೆಗಳಲ್ಲಿ ಸಂಪ್ರದಾಯದ ಮನೋಭಾವನೆ ಇದ್ದು ವಿಧವಾ ಪುನರ್ವಿವಾಹದ ಬೆಂಬಲ ಕಂಡುಬಂದಿಲ್ಲ. ಆರ್ಥಿಕ ಸಬಲತೆ ಜೀವನದ ಸಮಸ್ಯೆಗೆ ಪರಿಹಾರ ಎಂದು ಸ್ತ್ರೀ ಶಿಕ್ಷಣಕ್ಕೆ ಒತ್ತು ನೀಡುತ್ತಾರೆ. ಕೊಡಗಿನ ಗೌರಮ್ಮನವರ ಕತೆಗಳಲ್ಲಿ ಬದುಕಿನ ಬಗ್ಗೆ ಪ್ರೀತಿ,ಮೌಲ್ಯದ ಬಗ್ಗೆ ಶ್ರದ್ಧೆ ಕಂಡುಬಂದರೂ, ಸ್ತ್ರೀ ಶಿಕ್ಷಣದ ಕುರಿತಾದ ಕಾಳಜಿ ವಿಧವಾ ಪುನರ್ವಿವಾಹದಲ್ಲಿಲ್ಲ. ಸರಸ್ವತಿಬಾಯಿ ರಾಜವಾಡೆಯವರ ಕಥೆಗಳಲ್ಲಿ ಹಲವು ಪ್ರಗತಿಪರ ಮನೋಧರ್ಮದ ಅಂಶಗಳು ಅಭಿವ್ಯಕ್ತವಾಗಿದೆ. ಈ ಹಂತದ ಬಹುತೇಕ ಲೇಖಕಿಯರು ಸಿದ್ಧಮಾದರಿಯ ಹೆಣ್ತನವನ್ನು ಸಮರ್ಥಿಸಿದ್ದು, ಸಂಪ್ರದಾಯಬದ್ಧ ಮನಸ್ಥಿತಿಯನ್ನು ಅಭಿವ್ಯಕ್ತಿಸಿದ್ದಾರೆ. ಇದಕ್ಕೆ ಅಪವಾದವೆಂಬಂತೆ ಶ್ಯಾಮಲಾ ಬೆಳಗಾಂವ್‌ಕರರ ಕತೆಗಳಲ್ಲಿ ಅಸಮ ವಿವಾಹ, ಒತ್ತಾಯದ,ಅನಿವಾರ್ಯದ, ಮೋಸದ ವಿವಾಹಕ್ಕೆ ಒಳಗಾದ ನಾಯಕಿಯರು ಸೋಡಾಚೀಟಿ, ಉಡಿಕೆ ಮುಂತಾದ ಪರಿಹಾರದ ಹಾದಿಗಳನ್ನು ಅಲ್ಲಲ್ಲೆ ಏರ್ಪಡಿಸಿಕೊಳ್ಳುತ್ತಾರೆ (ನೀಲೆಯ ಸಂಸಾರ, ನಡೆದು ಬಂದ ಲಕ್ಷ್ಮೀ , ದೊಡ್ಡಮ್ಮ ನೋಡಿದ ವರ ) ಎಂಬುದನ್ನು ಗುರುತಿಸಬಹುದು. ನವೋದಯ ಕಾಲದಲ್ಲಿನ ರಚನೆಗಳಲ್ಲಿ ಅಂದಿನ ಸಾಮಾಜಿಕ ಸಂದರ್ಭದಲ್ಲಿ ಸಾಂಪ್ರದಾಯಿಕ ಚೌಕಟ್ಟಿನ ಒಳಗಡೆಯೇ ನಿಂತು ಲೇಖಕಿಯರು ಸಮಸ್ಯೆಗಳನ್ನು ಗುರುತಿಸಿದ್ದಾರೆ. ವಯಕ್ತಿಕ, ಕೌಟುಂಬಿಕ, ಸಾಮಾಜಿಕ ಸಮಸ್ಯೆಗಳಿಗೆ ಒತ್ತು ನೀಡಲಾಗಿದ್ದು, ಆಧುನಿಕತೆ & ಸಾಂಪ್ರದಾಯಿಕತೆಯ ನಡುವಿನ ದ್ವಂದ್ವವೂ ಇಲ್ಲಿದೆ. ಅವಳ ಅಸ್ಮಿತೆಯನ್ನು ಶಿಕ್ಷಣ ಪಡೆಯುವುದರಲ್ಲಿದೆ ಎಂಬ ನಿಲುವು ಈ ಅವಧಿಯಲ್ಲಿ ಅಭಿವ್ಯಕ್ತವಾಗಿದೆ. ಬಹುಕಾಲದಿಂದ ತಮ್ಮನ್ನು ನಿಯಂತ್ರಿಸುತ್ತಿದ್ದ ನಂಬಿಕೆ, ವಿಚಾರ ಸಂಪ್ರದಾಯಗಳನ್ನು ಪ್ರಶ್ನಿಸುವ ದಿಟ್ಟತನವೂ ಅಲ್ಲಲ್ಲಿ ಕಂಡುಬಂದಿದೆ. ಸ್ತ್ರೀಪರ ದೃಷ್ಟಿಕೋನದಲ್ಲಿ ಅನೇಕ ಮಿತಿಗಳನ್ನು ಸೂಚಿಸಿದರೂ, ಸ್ತ್ರೀ ಸಂವೇದನೆಯ ಹಲವು ರೀತಿಯ ಆಯಾಮಗಳನ್ನು ವೈವಿಧ್ಯತೆಗಳೊಂದಿಗೆ ಬಿಂಬಿಸಿ ಇಂದಿನ ಸಮಾಜಕ್ಕೆ ಸ್ಫೂರ್ತಿ ನೀಡಿ, ಸ್ತ್ರೀ ಸಾಹಿತ್ಯಕ್ಕೆ ಭದ್ರ ಬುನಾದಿ ಒದಗಿಸಿದ್ದಾರೆ ಎಂದರೆ ಉತ್ಪ್ರೇಕ್ಷೆಯಾಗಲಾರದು.

‘ಪ್ರಗತಿಶೀಲ ಸಾಹಿತ್ಯ’ದ ಅವಧಿಯಲ್ಲಿ ಬಡತನ, ಸ್ತ್ರೀ ಕೇಂದ್ರಿತ ಸಮಸ್ಯೆಗಳು, ವಿಧವಾ ಸಮಸ್ಯೆ, ವೇಶ್ಯಾಸಮಸ್ಯೆ, ವರದಕ್ಷಿಣೆ,

ಕೌಟುಂಬಿಕ ವಿರಸ, ಬಹುಪತ್ನಿತ್ವ, ಬಂಜೆತನ, ವಿವಾಹೇತರ ಲೈಂಗಿಕ ಸಂಬಂಧ, ಕುಡಿತದ , ಜೂಜಿನ ಚಟದ ಗಂಡಂದಿರ ದಬ್ಬಾಳಿಕೆ, ಸ್ತ್ರೀ ಕಾರ್ಮಿಕರು, ಹೆಣ್ಣು ಜೀತದಾಳು, ಭಿಕ್ಷುಕಿಯರು, ದಲಿತರ, ರೈತರ, ಕಾರ್ಮಿಕರ ಸಮಸ್ಯೆ ಮುಂತಾದ ಯಾತನೆಗಳನ್ನು ಪ್ರಜ್ಞಾಪೂರ್ವಕವಾಗಿ ದಾಖಲಿಸಿದ್ದಾರೆ. ಪ್ರಗತಿಶೀಲ ಸಾಹಿತ್ಯದಲ್ಲಿ ಸ್ತ್ರೀ ಬದುಕಿನ ಬಹುಮುಖ್ಯ ಸ್ತರಗಳ ಚರ್ಚೆ ನಡೆದಿದೆ.ತ್ರಿವೇಣಿ, ಎಂ.ಕೆ. ಇಂದಿರಾ, ವಾಣಿ, ಅನುಪಮಾ ನಿರಂಜನ, ಹೆಚ್.ವಿ. ಸಾವಿತ್ರಮ್ಮ, ಸುಶೀಲ ಕೊಪ್ಪರ ಮುಂತಾದವರು ಈ ಕಾಲಘಟ್ಟದ ಗಮನಾರ್ಹ ಲೇಖಕಿಯರು. ಪ್ರಗತಿಶೀಲ ಕಥೆಗಾರ್ತಿಯರಲ್ಲಿ ಗಾಢವಾದ ಸಾಮಾಜಿಕ ಪ್ರಜ್ಞೆಯ ಮುಖದ ಕತೆಗಳು ಗಣನೀಯ ಪ್ರಮಾಣದಲ್ಲಿ ಕಂಡು ಬಂದಿಲ್ಲ. ಕೌಟುಂಬಿಕ ಚೌಕಟ್ಟಿನೊಳಗಡೆ ಸ್ತ್ರೀ ನಿಲುವುಗಳ ಕೇಂದ್ರೀಕರಣದ ಪ್ರಜ್ಞೆಯನ್ನು ಇವರು ಅಭಿವ್ಯಕ್ತಿಪಡಿಸಿದ್ದಾರೆ. ಕೆಲವು ಕಥೆಗಳಲ್ಲಿ ಪ್ರಗತಿಶೀಲತೆ ಸ್ವರೂಪ ಇದ್ದರೆ , ಇನ್ನು ಕೆಲವು ಕಥೆಗಳಲ್ಲಿ ನವೋದಯದ ಅಂಶಗಳು ಬಿಂಬಿತವಾಗಿವೆ. ವಾಣಿಯವರ ಕಥೆಗಳು ಪ್ರೇಮ ವಿವಾಹದ ಬೆಂಬಲದ ಮೂಲಕ ಸ್ತ್ರೀಗೆ ಸಂಗಾತಿ ಆಯ್ಕೆಯ ಅವಕಾಶಗಳನ್ನು ಕಲ್ಪಿಸುವುದರೊಂದಿಗೆ ಸ್ವಾವಲಂಬನೆ ನೀಡುತ್ತದೆ.ತ್ರಿವೇಣಿ ಹೆಣ್ಣಿನ ಸುಭದ್ರ ನೆಲೆಯನ್ನು ವಿವಾಹ, ಕುಟುಂಬದಲ್ಲಿ ಗುರುತಿಸಿ ಸಂಗಾತಿಯ ಮನೋಧರ್ಮದಲ್ಲಿ ಅವಳ ಭವಿಷ್ಯವನ್ನು ಕಂಡರೂ ಸಮಾಜದ ತಾರತಮ್ಯವನ್ನು ವಿರೋಧಿಸುತ್ತಾರೆ. ಅನುಪಮಾ ನಿರಂಜನ ಹೆಣ್ಣಿನ ಆಂತರಿಕ ಬೆಳವಣಿಗೆಯಲ್ಲಿ ಅವಳ ಶಿಕ್ಷಣ, ಉದ್ಯೋಗದ ಪ್ರಾಮುಖ್ಯವನ್ನು ವೈಚಾರಿಕ ನೆಲೆಯಲ್ಲಿ ಗುರುತಿಸುತ್ತಾರೆ. ಇವರಿಗಿಂತ ವಿಭಿನ್ನವಾದ ಮನೋಧರ್ಮ ಹೆಚ್.ವಿ. ಸಾವಿತ್ರಮ್ಮನದು. ಆಕೆ ತನ್ನ ಸಮಕಾಲೀನ ಪರಿಸ್ಥಿತಿಗಿಂತ ವಿಭಿನ್ನ ದೃಷ್ಟಿಕೋನ ಹೊಂದಿದ್ದು ಹೆಣ್ಣಿನ ಆರ್ಥಿಕ ಸ್ವಾವಲಂಬನೆ, ಛಲ, ದಿಟ್ಟತನವನ್ನು ಬೆಂಬಲಿಸುತ್ತ ಎಂತಹ ಪರಿಸ್ಥಿಗಳು ಎದುರಾದರೂ ಅದನ್ನು ಸಮರ್ಥವಾಗಿ ನಿರ್ವಹಿಸುವ ವ್ಯಕ್ತಿತ್ವಗಳನ್ನು ಮಾದರಿಯಾಗಿಸುತ್ತಾರೆ. ತ್ರಿವೇಣಿ, ಅನುಪಮಾ ನಿರಂಜನ, ಹೆಚ್.ವಿ. ಸಾವಿತ್ರಮ್ಮ ಅವಳ ಭಾವನೆಗಳ ಒಳನೋಟದತ್ತ, ಒಳಬದುಕಿನ ಚಹರೆಯತ್ತ ಸೂಕ್ಷ್ಮ ನೋಟ ಹರಿಸಲು ಪ್ರಯತ್ನಿಸುತ್ತಾರೆ.

ವ್ಯಕ್ತಿಪ್ರಜ್ಞೆ, ಮತ್ತು ವ್ಯಕ್ತಿ ಕೇಂದ್ರಿತ ಅನುಭವಗಳ ಪ್ರಮುಖ ಪಾತ್ರ ನಿರ್ವಹಿಸುವ 'ನವ್ಯ ಸಾಹಿತ್ಯ' ಬದುಕಿನ ಮೌಲ್ಯದ ಮರುಶೋಧನೆಗೆ ಒತ್ತು ನೀಡಿದರೂ ವೈಚಾರಿಕತೆ, ಆತ್ಮಶೋಧನೆ ಅಲ್ಲಿನ ನೆಲೆಗಟ್ಟಾಗಿದೆ. ಹೆಣ್ಣನ್ನು ಹೆಣ್ಣಾಗಿ ನೋಡುವ ಕ್ರಮವನ್ನು ಹೆಣ್ಣು ಮಾಡಿದಾಗ ತನ್ನ ಪ್ರೇಮದ, ಕಾಮದ ಅನುಭವವನ್ನು ಅವಳು ಅಭಿವ್ಯಕ್ತಿಸಿದಾಗ ಬದಲಾವಣೆಯ ಸಾಧ್ಯತೆಗಳನ್ನು ವೀಣಾ ಶಾಂತೇಶ್ವರ ಮತ್ತು ರಾಜಲಕ್ಷ್ಮಿ ಎನ್. ರಾವ್‌ರವರ ರಚನೆಗಳಿಂದ ತಿಳಿಯಬಹುದಾಗಿದೆ. ರಾಜಲಕ್ಷ್ಮಿಯವರ ಪಾತ್ರಗಳು ಸ್ವಂತ ಆಯ್ಕೆ, ಆಂತರಿಕ ಹೋರಾಟ, ಸ್ವಾವಲಂಬಿತ್ವ ಹೊಂದಿದ ಚೇತನಗಳನ್ನು ಪರಿಚಯಿಸುತ್ತವೆ. ಹೊರಪರಿಸರ, ಅಲ್ಲಿನ ಒತ್ತಡಗಳಿಗಿಂತ ಹೆಚ್ಚಾಗಿ ಆಂತರಿಕ ವಲಯದಲ್ಲಿ ನಡೆಯುವ ತುಮಲ, ದ್ವಂದ್ವ, ತನ್ನೊಳಗಿನ ಹೋರಾಟ ಇವರಲ್ಲಿ ಮುಖ್ಯವೆನಿಸುತ್ತವೆ. ಆಂತರಿಕ ಸಂಘರ್ಷ, ಬದುಕಿನ ಸೂಕ್ಷ್ಮ ಒಳನೋಟ, ಬದುಕಿನಲ್ಲಿ ಧರಿಸುವ ಮುಖವಾಡ ಮುಂತಾದವು ಇವರ ರಚನೆಗಳಲ್ಲಿ ಕಂಡುಬರುತ್ತವೆ. ಹೆಣ್ಣಿನ ದೇಹ, ಮನಸ್ಸು, ಅವಿವಾಹಿತ ತಾಯ್ತನ, ಹೆಣ್ತನದ ಕುರಿತಾಗಿ ಮೊದಲಬಾರಿಗೆ ಮುಕ್ತ ಅವಕಾಶ ಕಲ್ಪಿಸುವ ಮೂಲಕ ದಿಟ್ಟತನದಲ್ಲಿ ಮಾತನಾಡಿದ್ದು ವೀಣಾ ಶಾಂತೇಶ್ವರ. ಅವಳ ಮನೋವ್ಯಾಪಾರದ ಸಂಗತಿಗಳನ್ನು ತೀವ್ರವಾಗಿ ಮತ್ತು ಸೂಕ್ಷ್ಮವಾಗಿ ಬಿಚ್ಚಿಡುತ್ತಾರೆ. ವಸ್ತುವಿನ ದೃಷ್ಟಿಯಿಂದಲೂ ಪಾತ್ರಗಳನ್ನು ಕಟ್ಟುವ ನೆಲೆಯಿಂದಲೂ ವೀಣಾ ಶಾಂತೇಶ್ವರರ ಅಭಿವ್ಯಕ್ತಿ ವಿಭಿನ್ನತೆಯನ್ನು ಬಿಂಬಿಸುತ್ತದೆ. ಇಲ್ಲಿರುವ ಸೂಕ್ಷ್ಮ ಸಂವೇದನೆಗಳ ನಾಯಕಿಯರು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಅವಲಂಬಿತತೆ ತೋರದೆ ಸ್ವಾವಲಂಬಿತ್ವ ತೋರುತ್ತವೆ. ಪುರುಷ ಚಿಂತನೆಯ ಸಿದ್ಧ ಮಾದರಿ ಸ್ತ್ರೀತ್ವದ ನಿರ್ವಚನೆ ವೀಣಾರಲ್ಲಿ ಕಂಡುಬರದು. ಇಲ್ಲಿ ವ್ಯವಸ್ಥೆಗೆ ಅನಿವಾರ್ಯವಾಗಿ ಬಂಧಿತ ಸ್ತ್ರೀಯರಿಗೂ ತಮಗಾಗುತ್ತಿರುವ ಅನ್ಯಾಯದ ಅರಿವು ಕಂಡುಬರುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯ ಆರೋಪಿತ ಸ್ತ್ರೀ ಪಾತ್ರಗಳ ಎದುರು ವೀಣಾ ಶಾಂತೇಶ್ವರರ ಸ್ತ್ರೀ ಪಾತ್ರಗಳು ಮುಖಾಮುಖಿಯಾಗುತ್ತವೆ. ಆಧುನೀಕರಣಗೊಳ್ಳುತ್ತಿರುವ ಸಮಾಜಕ್ಕೆ ಪರಿವರ್ತನೆಯ ಮನೋಧೋರಣೆ ಅನಿವಾರ್ಯ ಎಂದು ಗುರುತಿಸಬಹುದು.

'ದಲಿತ– ಬಂಡಾಯ ಸಾಹಿತ್ಯ' ಭಿನ್ನ ಸ್ತರಗಳ ಮಹಿಳೆಯ ಧ್ವನಿಗೆ ಜೀವ ತುಂಬಿದವು. ಬಿ.ಟಿ. ಲಲಿತಾನಾಯಕ್, ಗೀತಾ ನಾಗಭೂಷಣ, ಎಂ.ಎಸ್.ವೇದಾ, ಬಿ.ಟಿ. ಜಾಹ್ನವಿ ಮುಂತಾದವರು ಕೆಳವರ್ಗದ ಸಮಸ್ಯೆಗಳನ್ನು, ಸಂವೇದನೆಗಳನ್ನು ಬಿಚ್ಚಿಟ್ಟರೆ, ಭಾಗೀರಥಿ ಹೆಗಡೆಯವರು ಬ್ರಾಹ್ಮಣ ಸಮುದಾಯದ ಸ್ತ್ರೀ ಶೋಷಣೆಯನ್ನು ಅನಾವರಣ ಮಾಡುತ್ತಾರೆ. ಸಾರಾ ಅಬೂಬಕರ್, ಬಾನು ಮುಷ್ತಾಕ್ ಮುಸ್ಲಿಂ ಬದುಕನ್ನು ಕಟ್ಟಿಕೊಡುವಲ್ಲಿ ಗಮನಾರ್ಹ ಪಾತ್ರ ನಿರ್ವಹಿಸುತ್ತಾರೆ. ವೈದೇಹಿ, ನೇಮಿಚಂದ್ರ, ಹೆಚ್ ನಾಗವೇಣಿ ಮುಂತಾದವರ ಕಥೆಗಳಲ್ಲಿ ಅವಳ ಸೂಕ್ಷ್ಮ ಸಂವೇದನೆಗಳು, ಅಂತರಂಗದ ಹಳವಂಡಗಳ ಸಹಜ ಅಭಿವ್ಯಕ್ತಿ ಜೊತೆಯಲ್ಲಿ ತನ್ನ ಬದುಕಿನ ನಿರ್ಧಾರಗಳಿಗೆ ತಾನೇ ಹೊಣೆಯಾಗಬಲ್ಲ ದಿಟ್ಟತೆಯೂ ಕಂಡುಬರುತ್ತದೆ. ನೇಮಿಚಂದ್ರರ ಕತೆಗಳು ಸಮಾಜಮುಖಿಯಾಗಿದ್ದು, ಪರಿವರ್ತನೆಯತ್ತ ಹೆಚ್ಚು ಗಮನ ನೀಡುತ್ತಲೆ ಹೊಸ ದೃಷ್ಟಿಕೋನದ ಹೆಣ್ಣು ಮತ್ತು ಗಂಡಿನಿಂದ ಸೃಷ್ಟಿಯಾದ ಸಮಾಜದ ಆಶಯವನ್ನು ಮೂಡಿಸುತ್ತದೆ. ಮುಸ್ಲಿಂ ಸಂವೇದನೆ, ಮೇಲ್ವರ್ಗ ಹಾಗೂ ಕೆಳವರ್ಗದ ಜನ ಸಮುದಾಯದ ಸಂಸ್ಕೃತಿ ದಾಖಲೀಕರಣ, ಸಂಪ್ರದಾಯ ಭಂಜನೆ,ಆಧುನಿಕತೆಯ ತೀವ್ರತೆ, ಜಾಗತೀಕರಣದ ಹಿನ್ನಲೆಯ ವಿಶಾಲ ಅಭಿವ್ಯಕ್ತಿ,ಸಮಾನತೆ ಬಯಸುವ ಗುಣ, ಎಲ್ಲವನ್ನೂ ಪ್ರಶ್ನಿಸುವ ಮತ್ತು ಎದುರಿಸುವ ಛಲವನ್ನು ಆಧುನಿಕ ಲೇಖಕಿಯರಲ್ಲಿ, ಅವರ ಕತೆಗಳಲ್ಲಿ ಕಾಣಬಹುದಾಗಿದೆ.

'ಸಮಕಾಲೀನ ಸಾಹಿತ್ಯ' ದ ಸಂದರ್ಭದಲ್ಲಿ ವ್ಯಂಗ್ಯ, ವಿಷಾದ, ಪ್ರತಿಭಟನೆ, ತೀವ್ರವಾದ ಆಕ್ಷೇಪ, ಸಮಾನತೆಯ ಹೋರಾಟವನ್ನು ಮೀರಿದ ಹೊಸ ನಿಲುವಿನ ವಿನ್ಯಾಸಗಳು ರೂಪಿತವಾಗುತ್ತಿವೆ. ತನ್ನ ಸ್ವಾಯತ್ತನೆಲೆಯ ಶೋಧದತ್ತ ಹೊರಟ ಸ್ತ್ರೀ ಸಮುದಾಯ ರಚನಾತ್ಮಕವಾಗಿ ತನ್ನನ್ನು ತಾನು ಕಟ್ಟುವ ಪ್ರಯತ್ನದಲ್ಲಿ ನಿರತವಾಗಿದೆ. ಪರಂಪರಾನುಗತವಾಗಿ ಬಂದ ಮೂಢನಂಬಿಕೆ, ಕಂದಾಚಾರಗಳನ್ನು ನಿರಾಕರಿಸುವ, ಪ್ರಧಾನ ಸಂಸ್ಕೃತಿಯ ದಬ್ಬಾಳಿಕೆಯನ್ನು ವಿರೋಧಿಸುವ; ಬದುಕಿನ ಹೊಸ ಸಾಧ್ಯತೆಗಳನ್ನು ಅನ್ವೇಷಿಸುವ, ಸ್ವೀಕರಿಸುವ, ವಿಶಾಲ ಪ್ರಪಂಚದಲ್ಲಿ ತಮ್ಮ ಅಸ್ತಿತ್ವ ಛಾಪಿಸುವ, ಅಸ್ಮಿತೆಯನ್ನು ಬಿಚ್ಚಿಡುವ ಹೀಗೆ ಸೀಮಿತ ಚೌಕಟ್ಟುಗಳಾಚೆಗಿನ ಬದುಕನ್ನು ಮೀರಿ ತನ್ನ ವ್ಯಾಪ್ತಿ ವಿಸ್ತರಿಸುವ ಬಹುಮುಖಿ ಆಯಾಮಗಳನ್ನು ಕಾಣಬಹುದು. ಸುನಂದಾ ಪ್ರಕಾಶ ಕಡಮೆಯವರ ಕಥೆಗಳಲ್ಲಿ ನಿತ್ಯ ಬದುಕಿನಲ್ಲಿ ಹೆಣ್ಣು ಎದುರಿಸಬಹುದಾದ ಜಂಜಡಗಳು, ಸಾಂಸಾರಿಕ ಬದುಕಿನ ಸೂಕ್ಷ್ಮ ವಿವರಗಳು, ಸಂಘರ್ಷದ ಕುರಿತಾದ ಒಳನೋಟವೊಂದು ಇಲ್ಲಿ ಚಲನೆ ಪಡೆದಿರುತ್ತದೆ. ಇವೆಲ್ಲ ಶೋಷಣೆ ಎಂಬ ಅರ್ಥವ್ಯಾಪ್ತಿಗೆ ಒಳಪಡದೆ ಹೋದರೂ ಅವಳ ಅಸ್ಮಿತೆಯ ಪರಿಕಲ್ಪನೆಗೆ ಹಲವಾರು ಏಟುಗಳನ್ನು ನೀಡಿರುವ ಸೂಕ್ಷ್ಮತೆಗಳ ಎಳೆಗಳು ಅಭಿವ್ಯಕ್ತವಾಗಿವೆ. ಮಲೆನಾಡಿನ ಪ್ರದೇಶದಲ್ಲಿ ಉಂಟಾಗುತ್ತಿರುವ ಆಧುನಿಕತೆಯ ಪ್ರಭಾವ, ನಗರೀಕರಣ, ಜಾಗತೀಕರಣದಿಂದಾದ ಗ್ರಾಮೀಣತೆಯ ಏರುಪೇರು ಅವುಗಳಲ್ಲಿ ಅಂತರ್ಗತವಾಗಿ ಪ್ರಕಟವಾಗುವ ಸ್ತ್ರೀ ಬದುಕಿನ ಸಂಘರ್ಷಗಳು ಎಲ್.ಸಿ.ಸುಮಿತ್ರಾರ ಕಥೆಗಳಲ್ಲಿ

ವ್ಯಕ್ತವಾಗುತ್ತವೆ.ಸ್ತ್ರೀ ಬದುಕಿನ ತೀವ್ರತೆ,ಸೂಕ್ಷ್ಮತೆಯನ್ನು ಗಮನಿಸುತ್ತ ಅವಳ ಅಸ್ಮಿತೆಯನ್ನು ಛಾಪಿಸುವಲ್ಲಿ ಸುಮಂಗಲಾ ರ ಕಥೆಗಳು ಯಶಸ್ವಿಯಾಗುತ್ತವೆ. ಗಂಡು ಹೆಣ್ಣಿನ ಸಂಬಂಧಗಳ ಹುಡುಕಾಟ, ಅಲ್ಲಿನ ಮೂಲಭೂತ ಪ್ರಶ್ನೆಯತ್ತ ಉಮಾರಾವ್ ರವರ ಕತೆಗಳು ಸಾಗುತ್ತವೆ. ಸ್ತ್ರೀ ಪ್ರಜ್ಞೆಯ ವಿಕಾಸ, ಹೊಸ ಎಚ್ಚರದ ಶೋಧ ಮಿತ್ರಾ ವೆಂಕಟ್ರಾಜ, ತುಳಸಿ ವೇಣುಗೋಪಾಲ, ಗೀತಾ ವಸಂತ್, ಶಾಂತಿ ಅಪ್ಪಣ್ಣರ ಕತೆಗಳಲ್ಲಿ ಕಾಣಬಹುದು. ಇಲ್ಲಿನ ಆಧುನಿಕ ಸ್ತ್ರೀ ಪಾತ್ರಗಳು ಸಮಾಜದ ವ್ಯವಸ್ಥೆಯನ್ನು, ಅದರ ಕ್ರೂರತೆಯನ್ನು ಆತ್ಮವಿಶ್ವಾಸದಿಂದ ಎದುರಿಸಿ ತಮ್ಮ ಅಸ್ಮಿತೆಯನ್ನು ಸ್ಥಾಪಿಸುವ ಮಾದರಿಗಳು.

**ಉಪಸಂಹಾರ:** ತ್ಯಾಗ, ಬಲಿದಾನ, ಸಹಿಷ್ಣುತೆಯ ಉತ್ಸವ ಮೂರ್ತಿಯಂತೆ ಅಧೀನತೆಯಲ್ಲಿ ಬದುಕಿದ್ದರೂ ಅಲ್ಲಲ್ಲಿ ತನ್ನ ನೈಜ ಸಂವೇದನೆಗೆ ಅಭಿವ್ಯಕ್ತಿ ನೀಡಿರುವ ರೀತಿ ಮತ್ತು ಗುಪ್ತಗಾಮಿನಿಯಂತೆ ಅಂತರ್ಗತವಾಗಿ ಪ್ರವಹಿಸುತ್ತಿದ್ದ ಪ್ರಜ್ಞೆಯೊಂದು ಹೊರಜಗತ್ತಿನೊಂದಿಗೆ ಮುಖಾಮುಖಿಯಾಗುವ ಕ್ರಮ ಅವಳ ಅಸ್ತಿತ್ವದ, ಸ್ವಪ್ರಜ್ಞೆಯ ಕುರುಹಾಗಿದೆ. ತನ್ನ ದೇಹ – ಮನಸ್ಸಿನ ಮೇಲೆ ತನ್ನ ಪ್ರಭುತ್ವ ಸಾಧಿಸಿದ ಪಿತೃ ಪ್ರಧಾನ ವ್ಯವಸ್ಥೆಗೆ ಒಳಪಟ್ಟರೂ, ಅಲ್ಲಲ್ಲಿ ಪ್ರಭುತ್ವವನ್ನು ಪ್ರಶ್ನಿಸುವ, ಪ್ರತಿಭಟಿಸುವ, ನಿರ್ಬಂಧಗಳನ್ನು ಮೀರುವ ಚೌಕಟ್ಟಿನ ಎಲ್ಲೆಯನ್ನು ದಾಟುವ ಪ್ರಯತ್ನಗಳು ಅನನ್ಯವಾದುದು. ಸಮಾಜೋಸಂಸ್ಕೃತಿ ಹೇರಿದ ಕಟ್ಟುಪಾಡುಗಳ ಅಭೇದ್ಯ ಕೋಟೆಯಲ್ಲಿ ಬಿರುಕನ್ನು ಮೂಡಿಸಲು ಸಮರ್ಥರಾದ ಸ್ತ್ರೀ ಮಾದರಿಗಳು ಗಣನೀಯವಾಗಿದೆ. ಸ್ತ್ರೀ ವಿಮೋಚನೆ ಎಂಬುದು ಇನ್ನಾರಿಂದಲೊ ಆಗುವುದಲ್ಲ ಸ್ವತಃ ಸ್ತ್ರೀ ತನ್ನ ಬಿಡುಗಡೆಗಾಗಿ ಪ್ರಯತ್ನಿಸಬೇಕು. ವ್ಯವಸ್ಥೆಯಲ್ಲಿನ ಸ್ತ್ರೀತ್ವದ ಕುರಿತಾಗಿ ಹೊಣೆಯಲ್ಲಿಟ್ಟ ಮಿಥ್ಯೆಗಳನ್ನು ಅವಳೇ ಒಡೆಯಬೇಕು. ಎಲ್ಲಿಯವರೆಗೆ ಸ್ತ್ರೀ ತನ್ನ ಮೇಲಿನ ಒತ್ತಡ, ಸ್ಥಾಪಿತ ಮೌಲ್ಯಗಳ ಅಧೀನತ್ವವನ್ನು ಕಳಚಲಾರಳೊ ಅಲ್ಲಿಯವರೆಗೆ ಅವಳ ಅಸ್ಮಿತೆಯನ್ನು ನಿರ್ಮಿಸಿಕೊಳ್ಳಲು ಸಾಧ್ಯವಿಲ್ಲ. ಸಮಕಾಲೀನ ಸಂದರ್ಭದಲ್ಲಿ ಮಹಿಳೆ ಜೈವಿಕ ಅಪೇಕ್ಷೆಗಳನ್ನು, ಸಮಾಜ ನಿರ್ಮಿಸಿದ ಕಟ್ಟುಕಟ್ಟಳೆಗಳ ನಿರೀಕ್ಷೆಯನ್ನು, ಸಿದ್ಧ ಮಾದರಿತ್ವವನ್ನು, ಲಿಂಗ ತಾರತಮ್ಯವನ್ನು ನಿರಾಕರಿಸಿ ತನ್ನ ಆಯ್ಕೆಯ ಸ್ವಾತಂತ್ರ್ಯವನ್ನು, ಅಸ್ಮಿತೆಯ ಹಂಬಲವನ್ನು ಎತ್ತಿ ಈಕೆ ಹಿಡಿಯುತ್ತಿದ್ದಾಳೆ. ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುತ್ತಿದ್ದಾಳೆ.ಸಮಾಜ ನಿರ್ಮಿತ ಕಟ್ಟಳೆಯ ಒಳಗಡೆ ಸ್ವೀಕೃತ ಮಾದರಿಗಳನ್ನು ಪ್ರಶ್ನಿಸದೆ ಒಪ್ಪಿಕೊಂಡ ಬದುಕನ್ನು ಪುನರ್ ವಿಮರ್ಶಿಸುವ, ತಿರಸ್ಕರಿಸುವ, ಸ್ವಾಯತ್ತ ನೆಲೆಯ ಶೋಧದತ್ತ ಹೊರಟಿರುವ, ಪರಿಸ್ಥಿತಿಯನ್ನು ತನಗೆ ತಕ್ಕಂತೆ ಪರಿವರ್ತಿಸಲು ಪ್ರಯತ್ನಿಸುವ ಮಾದರಿಗಳು ಸಮಕಾಲೀನ ಸಂದರ್ಭದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ.

**ಪರಾಮರ್ಶನ ಗ್ರಂಥಗಳು:**


1. ಹೆಚ್.ಎಸ್.ಶ್ರೀಮತಿ,'ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006.
2. ಹೆಚ್.ಎಸ್.ಶ್ರೀಮತಿ, 'ಹೆಣ್ಣುಬರೆಹದ ಒಳಬಂಡಾಯ', ಪ್ರಗತಿ ಗ್ರಾಫಿಕ್ಸ್,ಬೆಂಗಳೂರು, 2010.
3. ಎಂ.ಎಸ್. ಆಶಾದೇವಿ, 'ನಡುವೆ ಸುಳಿವ ಆತ್ಮ', ಅಹರ್ನಿಶಿ ಪ್ರಕಾಶನ, 2011.
4. ವೈದೇಹಿ, "ಅಲೆಗಳಲ್ಲಿ ಅಂತರಂಗ" ಅಕ್ಷರ ಪ್ರಕಾಶನ ಹೆಗ್ಗೋಡು, 2006.
5. ವೀಣಾ ಶಾಂತೇಶ್ವರ್, 'ನಡೆದದ್ದೇ ದಾರಿ........', ಸುಂದರ ಪುಸ್ತಕ ಪ್ರಕಾಶನ, ಧಾರವಾಡ, 2006.
6. ಗೀತಾನಾಗಭೂಷಣ, "ಕ್ಯಾದಿಗಿ ಬನದಾಗ ಕತೆಯಾಗಿ ನಿಂತವರು" (ಇಲ್ಲಿಯವರೆಗಿನ ಕಥೆಗಳು) ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, 2006.
7. (ಸಂ) ಬರಗೂರು ರಾಮಚಂದ್ರಪ್ಪ, 'ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ', ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2006.
8. ಅಮೂರ್, ಜಿ.ಎಸ್. 1999. 'ಅವಳ ಕಥೆಗಳು', ಪ್ರಿಸಂ ಬುಕ್ಸ್ ಪ್ರೈ.ಲಿ. ಬೆಂಗಳೂರು.
9. ಡಾ.ಗಿರಿಜಾ ಶಾಸ್ತ್ರಿ, 'ಕಥಾ ಮಾನಸಿ', ಸಾಹಿತ್ಯ ಪ್ರಕಾಶನ,ಮುಂಬಯಿ. 2000.
10. ಜಿ.ಎಸ್.ಅಮೂರ್. 2012, 'ಕನ್ನಡ ಕಥನ ಸಾಹಿತ್ಯ: ಸಣ್ಣಕತೆ', ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
11. ಸಾರಾ ಅಬೂಬಕ್ಕರ್, 'ಚಪ್ಪಲಿಗಳು ಆಯ್ದ ಕತೆಗಳು', ಚಂದ್ರಗಿರಿ ಪ್ರಕಾಶನ, 2014: